1. ಪ್ರಕಟಣೆ

ವಿಷಯ:– ವಿಧಾನಸಭೆಯ ಸಲಹಾ ಸಮಿತಿಯ ಕಾರ್ಯಕಲಾಪಗಳ ವರದಿ

ಅಧ್ಯಕ್ಷರು:– ದಿನಾಂಕ 24.07.2007ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

1. ದಿನಾಂಕ 28ನೇ ಜುಲೈ, 2007ರ ಶನಿವಾರದಂದು ಅಧಿವೇಶನವನ್ನು ನಡೆಸಲಾಗುವುದು. ಅಲ್ಲದೇ ಪ್ರಸ್ತುತ ಅಧಿವೇಶನವನ್ನು 3ನೇ ಆಗಸ್ಟ್ 2007ರವರೆಗೆ ವಿಸ್ತರಿಸಲಾಗಿದೆ.
2. ಪ್ರತಿದಿನ ಕಾರ್ಯಕಲಾಪಗಳನ್ನು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 6.00 ಗಂಟೆಯವರಗೆ ಭೋಜನ ವಿರಾಮವಿಲ್ಲದೆ ನಡೆಸಲಾಗುವುದು.
3. ದಿನಾಂಕ 27.7.2007 ರಂದು ವಿತ್ತೀಯ ಕಾರ್ಯಕಲಾಪಗಳ ಚರ್ಚೆ ಪೂರ್ಣಗೊಳ್ಳಲಿದ್ದು, ದಿನಾಂಕ 28.7.2007 ರಂದು ಉಪಮುಖ್ಯಮಂತ್ರಿಯವರು ಹಾಗೂ ಮುಖ್ಯಮಂತ್ರಿಯವರಿಂದ ಉತ್ತರ ಹಾಗೂ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಿ ವಿಧಾನ ಪರಿಷತ್ತಿಗೆ ಕಳುಹಿಸಲಾಗುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು adjournment motion ಕೊಟ್ಟಿದ್ದೆ.

ಅಧ್ಯಕ್ಷರು: after question hour.

ಶ್ರೀ ಜೆ. ಸಿ. ಮಾಧುಸ್ವಾಮಿ: ಈ ಕ್ಯಾಂಟೀನ್‌ನನ್ನು ನಿಲ್ಲಿಸಿಬಿಡಿ. ಅಲ್ಲಿ ಹೋಗುವಂತೆ ಬರುವಂತೆ ಇಲ್ಲ. ಯಾವ ಮಂತ್ರಿ ಊಟಕ್ಕೆ ಕರೆದರೂ ಎಲ್ಲರೂ ತುಂಬಿಕೊಂಡಿರುತ್ತಾರೆ. ಎಂ.ಎಲ್.ಎ.ಗಳಿಗೆ ಮಧ್ಯಾಹ್ನ ಊಟಕ್ಕೆ ಏನಾದರೂ arrange ಮಾಡಿದರೆ ಅಲ್ಲಿ ಕಾಲು ಇಡದಂತೆ ಆಗಿದೆ. ಯಾರು ಬರುತ್ತಾರೆ, ಎಲ್ಲಿಂದ ಬರುತ್ತಾರೆ ಸ್ವಲ್ಪ ನೋಡಿ. ನಮಗೆ ಊಟ ಬೇಡ, ನಿಲ್ಲಿಸಿಬಿಡಿ ದಯವಿಟ್ಟು,

ಅಧ್ಯಕ್ಷರು: ಆಯಿತು. ಈಗ ಪ್ರಶ್ನೋತ್ತರಗಳು.

2. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಗ್ರಾಮ ಪಂಚಾಯತ್‌ಗಳ ವಾರ್ಷಿಕ ಅನುದಾನ

183 (1480) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–